ಈ ಅಭ್ಯಾಸವನ್ನು ಬಿಟ್ಟುಬಿಟ್ಟೆ. ನಮ್ಮ ಚಿಕ್ಕಪ್ಪ, ಸಂಬಂಧಿಕರು, 'ನಮ್ಮ ಓಣಿಗೆ ನೀನು ವಿದ್ಯಾವಂತ ಇದಿ. ಪ್ರತಿವರ್ಷ ನೀನು ಬಾ' ಅಂದರು. ನಾನು, 'ಇಲ್ಲಪ್ಪ, ಇಷ್ಟು ದೂರದಿಂದ ಬರ್ಲಿಕ್ಕಾಗಂಗಿಲ್ಲ... ಮೇಲಾಗಿ ನನ್ನ ವಿಚಾರಗಳ್ನ ನಮ್ಮ ಸಮಾಜದ ಬಹಳಷ್ಟು ಮಂದಿ ಒಪ್ಪಂಗಿಲ್ಲ' ಅಂದೆ. ವರ್ಷಕ್ಕೊಮ್ಮೆ ಹೋಗುವ 'ಸ್ವಂತ' ಎಂದು ಭಾವಿಸುವ ನಮ್ಮ ಊರಿಗೆ ಮರಾಠಿಯಲ್ಲಿ 'ಮೇಡ್' ಅಂತಾರ. 'ಮೇಡ್' ಶಬ್ದದ ಅರ್ಥ 'ಊರು' ಅಂತಲೂ ಆಗಬಹುದು, 'ಓಣಿ' ಅಂತಲೂ ಆಗಬಹುದು. ನಾನು ಶಿವಣಗಿ ಬಿಟ್ಟು ಅರವತ್ತು ವರ್ಷದ ಮೇಲಾಯ್ತು. ಹಾಗಾಗಿ ನಂಗೆ ಎಲ್ರೂ, 'ಅವರಿಗೆ ಯಾವ 'ಮೇಡ್' ಇಲ್ಲಪ್ಪ, ಅವ್ರ ಬೆನ್ನಿಗೆ ಯಾರೂ ಹಿರಿಯರಿಲ್ಲ, ಪಂಚರಿಲ್ಲ, ಯಾರೂ ಅವರ ಮನಿಗೆ ಹೆಣ್ಣು ಕೊಡಬೇಡ್ರಿ, ಹೆಣ್ಣು ತಗೋಬೇಡ್ರಿ' ಅನ್ನುತ್ತಿದ್ರು. ನನಗೆ ಶಿಕ್ಷಣ ಸಿಕ್ಕಿತು, ನೌಕರಿ ಮಾಡಿದೆ, ಹಂಗಾಗಿ ಯಾರೋ ಅವರವರೇ ಸಂಬಂಧ ಹುಡುಕಿಕೊಂಡು ಬಂದು ನನ್ನ ಮಕ್ಕಳ ಮದುವಿ ಆಯ್ತು. ನನಗೆ ಬಹಿಷ್ಕಾರದ ಸಮಸ್ಯೆ ಏನೂ ಆಗಲಿಲ್ಲ, ಅದಕ್ಕ ಕಾರಣ ವಿದ್ಯೆ. ನಂಗೆ ಸ್ವಲ್ಪ ಕಾನೂನು ಗೊತ್ತಿತ್ತು, ಹಾಗಾಗಿ ನಡೆದು ಹೋಯ್ತು. ಬೇರೆಯವ್ರಿಗೆ ಹೀಗಾಗಂಗಿಲ್ಲ...

◆ **ಯಾಕೆ?**

ಯಾಕಂದ್ರ, ನಮ್ಮೊಳಗ ಇವತ್ತಿಗೂ ಕಾನೂನು ಗೊತ್ತಿಲ್ಲದ, ವಿದ್ಯೆ ಇಲ್ಲದ ಜನರೇ ಬಹಳ ಮಂದಿ ಅದಾರ. ಪಂಚಾಯ್ತಿನಾಗ ಇವರಿಗೆ ದಂಡ ಹಾಕ್ತಾರ... ದಂಡದ ರೊಕ್ಕದ ಭಾರ ತೀರಿಸಕ್ಕಾಗದೆ ಎಷ್ಟೊಂದು ಮನೆಗಳು ಮುರಿದು ಹೋಗ್ಯಾವ... ದಂಡ ತೀರಿಸಾಕೆ ಸಾಲ ಮಾಡ್ತಾರ, ಬಡ್ಡಿ ತೀರಿಸಾಕ್ಕಾಗದೆ ಜೀವನಪೂರ್ತಿ ಹೆಣಗಾಡ್ತಾರ. ನಾನು ಎಷ್ಟೋ ಜನರಿಗೆ ಹೇಳೀನಿ, 'ಈ ಕಾಲದಾಗ ಇವೆಲ್ಲ ಇದೇನು ಬಿಡ್ರಪ್ಪ, ಕಾನೂನ್ನೈತಿ... ಮಕ್ಕಳಿಗೆ ಶಿಕ್ಷಣ ಕೊಡ್ರಿ, ಯಾರೂ ನಮ್ಮನ್ನ ಆಳಬೇಕಾಗಿಲ್ಲ... ನ್ಯಾಯ ಪಂಚಾಯ್ತಿ ಮಾಡೋವ್ರೂ ಶುದ್ಧ ಅಲ್ಲ, ಅವ್ರ ಮನೆಯೊಳಗೆನೇ ಎಷ್ಟೋ ಅನ್ಯಾಯ ನಡೀತಾ ಅವ, ಅವರಿಗೆ ಯಾವ ನೈತಿಕ ಹಕ್ಕಿರತೈತಿ...' ಏನು ಹೇಳಿದರೂ ಜನ ಕೇಳಾಂಗಿಲ್ಲ...

◆ **ಇದೆಲ್ಲ ಈಗಲೂ ನಡೆಯುತ್ತಾ?**

ಹೌದ್ರಿ...

◆ **ದಂಡ ಹಾಕೋದು ಯಾವ ಕಾರಣಕ್ಕೆ?**

ಯಾರೋ ಆಷಾಢಕ್ಕೆ ಬರೋದನ್ನ ತಪ್ಪಿಸಿದರು ಅಂದ್ರೆ ದಂಡ ಹಾಕ್ತಾರ ಅಥವಾ ನಮ್ಮ ಸಮುದಾಯದ ಹುಡುಗರು ಬೇರೆ ಜಾತಿಯವರ್ನ ಪ್ರೀತಿ ಮಾಡಿದ್ರೆ ಅಥವಾ ಅಂತರ್ಜಾತಿ ಮದುವಿ ಆದ್ರೆ ದಂಡ ಹಾಕ್ತಾರ. ಒಂದು ಉದಾಹರಣೆ ಹೇಳ್ತೀನಿ: ನಮ್ಮ ಪರಿಚಯದ ಒಬ್ಬರಿಗೆ ಮಕ್ಕಳಿರಲಿಲ್ಲ, ಹೆಣ್ಣು ಮಗೂನ ಅವರ ಸಂಬಂಧಿಕರು ಇವರ ಹತ್ತಿರ ಬಿಟ್ಟಿದ್ದರು. ಅಧಿಕೃತವಾಗಿ ದತ್ತು ಮಾಡಿಕೊಳ್ಳದೇ ಇದ್ರೂ ಇವರು ಆ ಹುಡುಗೀನ ಪ್ರೀತಿಯಿಂದ ಸಾಕಿ ಬೆಳೆಸಿ, ಅವಳ ಲಗ್ನನ ಫಿಕ್ಸ್ ಮಾಡಿದ್ರು. ಆದರೆ ಆ ಹುಡುಗಿ ಬೇರೆ ಯಾರನ್ನೋ ಪ್ರೀತಿಸಿ ಅವನ ಜೊತೆ ಹೋಗಿಬಿಟ್ಟು. ಹಿರೀಕರು ಯಾರಿದಾರಲ್ರಿ... ಕೆಲದಿನ ಆದ ಮೇಲೆ ಅವಳನ್ನ ಹಿಡಕೊಂಡು ಬಂದು ಪಂಚಾಯ್ತಿ ಮಾಡಿದ್ರು. ಹುಡುಗಿ ಪ್ರೀತಿಸಿದವನನ್ನೇ ಮದುವೆ ಆಗ್ತೀನಿ ಅಂತ ಹಟ ಹಿಡಿದಳು. ಅವರಿಬ್ಬರೂ ವಿವಾಹದ ವಯಸ್ಸಿನವರಾಗಿದ್ದರಿಂದ ಪಂಚಾಯ್ತಿ ವಿರೋಧಿಸಿ ಮದುವೆ ಆದ್ರು. ಈ ವ್ಯಾಜ್ಯ ಪೊಲೀಸ್ ಸ್ಟೇಷನ್ ಮೆಟ್ಟಲೇರುತ್ತೆ ಅಂತ ಗೊತ್ತಾಗಿ ಪಂಚಾಯ್ತಿನಲ್ಲಿ ಹುಡುಗಿ ಮನೆಯವರಿಗೆ ಮೂರು ಲಕ್ಷ ದಂಡ, ಹುಡುಗನ ಮನೆಯವರಿಗೆ ಎರಡು ಲಕ್ಷ ದಂಡ ಹಾಕಿದ್ರು. ಇದಕ್ಕೆಲ್ಲ ಏನು ಹೇಳಬೇಕು ಹೇಳಿ? ಇಂಥ ಎಷ್ಟೋ ವ್ಯಾಜ್ಯದಲ್ಲಿ ನಾನು ಮಧ್ಯೆ ಹೋಗಿ 'ಯಾಕೆ ದಂಡ ಕೊಡ್ತೀರಿ, ಪೊಲೀಸ್ ಕಂಪ್ಲೇಂಟ್ ಕೊಡಿ' ಅಂದ್ರೆ, 'ನೀನಪ್ಪಾ ಕಲ್ತಾವ, ನೌಕರಿ ಮಾಡಾಂವ, ನಿಂಗೆ ಯಾರೂ ಬೇಕಿಲ್ಲ, ನಮ್ಮಂತವ್ರಿಗೆ ಮಕ್ಕಳದಾವ. ಅವಕ್ಕ ಸಂಬಂಧ ಬೆಳಸಾಕ ಪಂಚರು ಬೇಕು. ಜಾತಿ ಬಿಟ್ಟು ಹೋಗಾಕೆ ಹೆಂಗಾಗ್ತದಿ?' ಅಂತಾರ. ಶಿಕ್ಷಣದ ಕೊರತೆ, ಮೂಢನಂಬಿಕೆ ಸೇರ್ಕೊಂಡು ಬದ್ಕು ಕಗ್ಗಂಟಾಗ್ಯದ. ತಳಸಮುದಾಯದ ಎಲ್ಲ ಜಾತಿಗಳಲ್ಲೂ ಇದೇ ರೀತಿಯ ಆದರೆ ಬೇರೆ ಸ್ವರೂಪದ ಪದ್ಧತಿ ಇರೋದು ನಾವು ನೋಡ್ತಿವಲ್ಲ?

ಇನ್ನೊಂದು ಘಟನೆ ಹೇಳ್ತೀನಿ: ನನ್ನ ತಂಗಿಯ ಮಗ ಒಬ್ಬ ಅತಿಥಿ ಉಪನ್ಯಾಸಕ ಆಗಿದ್ದಾನ. ಅಂವ ಅಲ್ಲಿ ತನ್ನ